# ಬಯಲಾಂಜನೇಯ



**ವಸುಮತಿ ಉಡುಪ**

ಕಲೆ: ಬಸವರಾಜಾಚಾರ್ ಕೆ.ಆರ್.

"ಗುಂಡೀ, ತಲೆ ನೆಟ್ಟಗಿಟ್ಕೊಂಡು ಕೆಲಸ ಮಾಡು. ಉದ್ದಿನಬೇಳೆಗೆ ನೀರು ಹಾಕಿ ಹಾಕಿ ಅರಿ. ಲಾಯ್ಬು ಒದಗುತ್ತೆ" ಫಣಿಯಮ್ಮ ವಿನಾಕಾರಣ ಯಜಮಾನಿಕೆಯ ಒಂದು ಮಾತು ಒಗಾಯಿಸಿದರು. ಗುಂಡಮ್ಮ ತುಟಿ ಒಡೆಯದೆ ಗುಡುಗುಡುಗುಡು ರುಬ್ಬುಗುಂಡನ್ನು ಅದೇ ಲಯದಲ್ಲಿ ತಿರುಗಿಸುವುದರಲ್ಲಿ ಗರ್ಕಾಗಿದ್ದಳು. ಶನಿವಾರ ಬಂತು ಅಂದರೆ ಅವಳಿಗೆ ರಟ್ಟೆಮುರಿ ಕೆಲಸ. ಹಿಂದಿನ ರಾತ್ರಿ ನೆನೆಸಿ ಗಳುವಿನ ಮೇಲೆ ಹರಗಿದ ಮಡಿಸೀರೆ ಉಟ್ಟು, ಎರೆದುಕೊಂಡ ತಲೆಗೂದಲಿಗೆ ತುದಿಗಂಟು ಹಾಕಿ, ಬೆಳಗಾಮುಂಚೆ ಅತ್ತೆ ನೆನೆಸಿಟ್ಟ ಉದ್ದಿನಬೇಳೆಯ ಡಬರಿ ಪಕ್ಕದಲ್ಲಿ ಎತ್ತಿಟ್ಟುಕೊಂಡು ಅರೆಯಲು ಕೂತಳು ಅಂದರೆ ಗಂಟೆಗಟ್ಟಲೆ ಇದೇ ದೊಡ್ಡ ಉದ್ಯೋಗ. ಊರಲ್ಲಿರುವ ಏಕೈಕ ಆಂಜನೇಯನ ಗುಡಿಯಲ್ಲಿ ಶನಿಶನಿವಾರ ಜನಸ್ತೋಮ. ಊರು ಸಣ್ಣದಾದರೇನು, ದೇವರ ಖ್ಯಾತಿ ಅಕ್ಕಪಕ್ಕದ ಹಳ್ಳಿಗಳಿಗೆ ಹರಡಿ ಎಲ್ಲೆಲ್ಲಿಂದಲೋ ಬರುತ್ತಾರೆ ಜನ. ಹನುಮನ ಪೂಜೆ ಮಾಡುವಾಗಿನ ನೀಲಕಂಠಶಾಸ್ತ್ರಿಗಳ ತನ್ಮಯತೆ, 'ಠಣ್' ಎಂದು ಗಂಟೆ ಹೊಡೆದಂತೆ ಕಿವಿದುಂಬುವ ಸಂಸ್ಕೃತಭಾಷೆ, ಜನರನ್ನು ಯಾವುದೋ ಹೊಸ ಜಗತ್ತಿಗೆ ಕೊಂಡೊಯ್ಯುವಂತೆ ತನ್ನಷ್ಟಕ್ಕೆ ಮೈದುಂಬುತ್ತದೆ ಭಕ್ತಿಭಾವ. ಶನಿವಾರ ದೇವಸ್ಥಾನದಲ್ಲಿ ಭಜನಾಮಂಡಳಿಯೂ ನೆರೆಯುತ್ತದೆ. ಗಂಡಸರು ಮಾತ್ರವಲ್ಲ, ಹೆಂಗಸರೂ ಪೈಪೋಟಿಯಿಂದ ಭಜನೆಯಲ್ಲಿ ಪಾಲ್ಗೊಳ್ಳುತ್ತಾರೆ. ರಾಮ, ಹನುಮರ ಸಂಕೀರ್ತನೆಗಳು ವಾತಾವರಣವನ್ನು ನಾದಮಯವನ್ನಾಗಿಸುತ್ತವೆ. ಊರಿನ ಯಾರಾದರೊಬ್ಬರು ಚರುಪು ಹಂಚುವ ಸೇವೆಯನ್ನು ವಹಿಸಿಕೊಂಡಿರುತ್ತಾರೆ. ಪರವೂರವರೂ ಈ ಸೇವಾರ್ಥ ನಡೆಸುವುದರಲ್ಲಿ ಕಮ್ಮಿಯೇನಿಲ್ಲ. ಒಂದು ದಿನದ ಪನಿವಾರಕ್ಕೆ ಇಂತಿಷ್ಟು ಎಂದು ದರ ಪೂರೈಸಿದರೆ ಸೈ, ಶಾಸ್ತ್ರಿಗಳ ಮನೆಯಲ್ಲಿ ತಯಾರಾಗುತ್ತದೆ ಚರ್ಪು. ಮಹಾಮಂಗಳಾರತಿಯ ಅನಂತರ ದೊನ್ನೆ